3

# ಮರಣದ ನಂತರ ಜೀವದ ಭರವಸೆ

*“ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮ ಫಲವಾದನು” (1 ಕೊರಿಂಥ 15:20).*

ಮರಣಾನಂತರ ಏನು ಸಂಭವಿಸುತ್ತದೆ? ಎಂಬುದನ್ನು ಪ್ರದರ್ಶಿಸಿ ತೋರಿಸಲಿಕ್ಕಾಗುವದಿಲ್ಲ, ಕೆಲವರು ಸತ್ತವರೊಳಗಿಂದ ಎಬ್ಬಿಸಲ್ಪಟ್ಟರೂ (ಚಾರ್ಟ್ ನೋಡಿರಿ), ಈ ಜೀವದ ಹೊರಗಿನ ಅವರ ಅನುಭವಗಳನ್ನು ಕುರಿತು ನಮಗೆ ಯಾವ ಮಾಹಿತಿ ಇರುವದಿಲ್ಲ.

ನಮ್ಮಲ್ಲಿ ಹೆಚ್ಚಾದವರು ಜೀವಿಸುವದನ್ನು ಮುಂದುವರಿಸಲು ಬಯಸುತ್ತೇವೆ. “ಮನುಷ್ಯರ ಹೃದಯದಲ್ಲಿ ಅನಂತಕಾಲದ ಯೋಚನೆಯನ್ನು ಇಟ್ಟಿದ್ದಾನೆ; ಆದರೂ ದೇವರು ಆದ್ಯಂತವಾಗಿ ನಡಿಸುತ್ತಿರುವ ಕೆಲಸವನ್ನು ಅವರು ಗ್ರಹಿಸಲಾರದಂತೆ ಮಾಡಿದ್ದಾನೆ” (ಪ್ರಸಂಗಿ 3:11) ಎಂದು ಸೊಲೊಮೋನನು ಹೇಳಿದ್ದಾನೆ. ಮರಣಾನಂತರ ನಮ್ಮ ಪ್ರಿಯರನ್ನು ಪುನಃ ನೋಡಲು ನಮ್ಮಲ್ಲಿ ಅನೇಕರು ನಿರೀಕ್ಷಿಸುತ್ತಾರೆ. ಸಮಾಧಿಯನ್ನು ದಾಟಿ ಜೀವಕ್ಕಾಗಿ ನಾವು ನಿರೀಕ್ಷಿಸುತ್ತೇವೆ. ಮರಣವು ಮುಚ್ಚಿದ ಬಾಗಿಲವಾಗಿರಬೇಕೆಂದು ನಾವು ಬಯಸುತ್ತೇವೆ; ಭವಿಷ್ಯದ ಅಸ್ತಿತ್ವದೊಳಗೆ ಮಾರ್ಗವನ್ನು ನಾವು ಬಯಸುತ್ತೇವೆ.

ತತ್ವಜ್ಞಾನಿಗಳು ಮರಣಾನಂತರದ ಜೀವದ ಅಸ್ತಿತ್ವವನ್ನು ವಿರೋಧಿಸುವ ವಿಚಾರಗಳನ್ನು ಕೊಟ್ಟಿದ್ದಾರೆ. ಅವರ ತೀರ್ಮಾನಗಳನ್ನು ತರ್ಕವು ಮಾತ್ರವೇ ಪರೀಕ್ಷಿಸಲಾರದು. ಯೋಗ್ಯವಾದದ್ದೆಂದು ತೋರುವಂಥದ್ದು ಸತ್ಯವಾಗಿರಲಿಕ್ಕಿಲ್ಲ.

“ಒಬ್ಬ ಮನುಷ್ಯನು ಸತ್ತು ಪುನಃ ಬದುಕಾನೇ?” (ಯೋಬ 14:14) ಎಂಬ ಪ್ರಶ್ನೆಯನ್ನು ಯೋಬನು ಕೇಳಿದನು. ಅದು ಕೇವಲ ದೈವಿಕ ಪ್ರಕಟನೆಯಿಂದ ಮಾತ್ರವೇ ಉತ್ತರಿಸಲ್ಪಡಬಲ್ಲದು. ತತ್ವಜ್ಞಾನ ಮತ್ತು ತರ್ಕಶಾಸ್ತ್ರಗಳು ಮರಣಾನಂತರದ ಜೀವದ ಬಗ್ಗೆ ಪ್ರಯೋಗಿಕ ರುಜುವಾತನ್ನಾಗಲೀ ಇಲ್ಲವೇ ಪ್ರಶ್ನಾತೀತ ಭರವಸೆಯನ್ನೂ ಕೊಡಲಾರವು. ನಿಶ್ಚಿತವಾದ ಪ್ರಕಟಣೆ ಮಾತ್ರ ಅದನ್ನು ಮಾಡಬಹುದು. ಸಮಾಧಿಯನ್ನು ದಾಟಿ ಜೀವನದಲ್ಲಿ ನಂಬಿಕೆಗಾಗಿ ಅಸ್ತಿವಾರವು ಅದರ ಮೇಲೆ ಕಟ್ಟಲ್ಪಟ್ಟಿರುವ ಪ್ರಕಟಣೆಯಷ್ಟು ಬಲವಾದದ್ದಾಗಿರುತ್ತದೆ. ನಿಶ್ಚಿತವಾದ ಪ್ರಕಟನೆಯು ನಮಗಿಲ್ಲದಿದ್ದರೆ, ನಮಗೆ ಜೀವನದ ನಂತರದ ಬಗ್ಗೆ ನಿಶ್ಚಿತವಾದ ಭರವಸೆಯಿರುವದಿಲ್ಲ.

### ಹಳೇ ಒಡಂಬಡಿಕೆಯಿಂದ ಭರವಸೆ

ನಿತ್ಯಜೀವದ ಸ್ವಭಾವವು ಹಳೇ ಒಡಂಬಡಿಕೆಯ ಪ್ರಮುಖ ಆಸಕ್ತಿಯಾಗಿರದಿದ್ದರೂ, ಅದು ಮರಣಾನಂತರ ಜೀವನದ ಸೂಚನೆಗಳನ್ನು ಕೊಡುತ್ತದೆ. ಇಸ್ರಾಯೇಲ್ಯರು ತಾವು ಪುನಃ ಜೀವಿಸುವೆವೆಂಬುದಕ್ಕೆ ರುಜುವಾತುಗಳಿಗಾಗಿ ತಮ್ಮ ಪರಿಶುದ್ಧ ಬರಹಗಳನ್ನು ಹುಡುಕಿದರು.

ಈ ಕೆಳಗಿನ ಕೆಲವು ವಾಕ್ಯಭಾಗಗಳು ಮರಣಾನಂತರದ ಜೀವದ ಬಗ್ಗೆ ಬೋಧಿಸುವವೆಂದು ಅವರು ಅರ್ಥಮಾಡಿಕೊಂಡರು:

> ಧರ್ಮೋಪದೇಶಕಾಂಡ 32:39 - "ಬದುಕಿಸುವವನೂ ಕೊಲ್ಲುವವನೂ ನಾನೇ."
>
> ಕೀರ್ತನೆ 17:15 - "ನನಗಾದರೋ, ನೀತಿಯಲ್ಲಿ ನಿನ್ನ ಮುಖವನ್ನು ನೋಡುವೆನು; ನಾನು ಎಚ್ಚತ್ತುಕೊಂಡಾಗ ನಿನ್ನ ಸ್ವರೂಪದರ್ಶನದಿಂದ ತೃಪ್ತನಾಗಿರುವೆನು."
>
> ಪ್ರಸಂಗಿ 12:7 - "ಮಣ್ಣು ಭೂಮಿಗೆ ಸೇರಿ ಇದ್ದ ಹಾಗಾಗುವುದು; ಆತ್ಮವು ತನ್ನನ್ನು ದಯಪಾಲಿಸಿದ ದೇವರ ಬಳಿಗೆ ಸೇರುವುದು."
>
> ಯೆಶಾಯ 26:19 - "ಮೃತರಾದ ನಿನ್ನ ಜನರು ಬದುಕುವರು, ನನ್ನವರ ಹೆಣಗಳು ಜೀವದಿಂದೇಳುವವು, ಮಣ್ಣಿನಲ್ಲಿ ಪವಳಿಸುವವರೆ, ಎಚ್ಚತ್ತು ಹರ್ಷಧ್ವನಿ ಗೈಯಿರಿ! ನೀನು ಸುರಿಯುವ ಇಬ್ಬನಿಯು ಜ್ಯೋತಿರ್ಮಯವಾದದ್ದು; ಭೂಮಿಯು ಸತ್ತವರನ್ನು ಹೊರಪಡಿಸುವದು."

ಈ ಹೇಳಿಕೆಗಳು ಮರಣಾನಂತರ ಜೀವನಕ್ಕೆ ಸಂಬಂಧಿಸಿರಬಹುದು, ಆದರೆ ಇವು, ಪುನಃ ಜೀವಿಸುವವರು ಹೇಗಿರುವರು ಇಲ್ಲವೇ ಅವರು ಜೀವಿಸುವ ಸ್ಥಳದ ಲಕ್ಷಣದ ಬಗ್ಗೆ ಪ್ರಕಟಿಸುವದಿಲ್ಲ. ಹೊಸ ಒಡಂಬಡಿಕೆಯು ಎರಡನ್ನೂ ಕುರಿತು ಎಷ್ಟೋ ಹೆಚ್ಚು ಮಾಹಿತಿಯನ್ನು ಕೊಡುತ್ತದೆ.

ಇತರ ಹಳೇ ಒಡಂಹಡಿಕೆಯ ವಾಕ್ಯಭಾಗಗಳು ನಾವು ಪುನಃ ಜೀವಿಸುವೆವು ಎಂದು ಹೇಳುತ್ತವೆ. "ನೀನಂತೂ ಸಮಾಧಾನದೊಡನೆ ಪಿತೃಗಳ ಬಳಿಗೆ ಸೇರುವಿ; ತುಂಬಾ ವೃದ್ಧನಾಗಿ ಉತ್ತರಕ್ರಿಯೆಯನ್ನು ಹೊಂದುವಿ" ಎಂದು ದೇವರು ಅಬ್ರಹಾಮನಿಗೆ ಹೇಳಿದನು (ಆದಿಕಾಂಡ 15:15; ನೋಡಿರಿ 25:8; 35:29; 49:33). "ನಿನ್ನ ಪಿತೃಗಳ ಬಳಿಗೆ ಸೇರುವಿ" ಎಂಬ ಮಾತು ಅಬ್ರಹಾಮನ ಪಿತೃಗಳು ಇನ್ನೂ ಅಸ್ತಿತ್ವದಲ್ಲಿರುವರು, ಆದರೆ ಇನ್ನೊಂದು ಕ್ಷೇತ್ರದಲ್ಲಿ ಎಂದು ಅರ್ಥ ಮಾಡಬಹುದು. ಅವರು ಅಸ್ತಿತ್ವದಲ್ಲಿರದಿದ್ದರೆ ಅವರು ಅವರ ಬಳಿಗೆ ಹೇಗೆ ಹೋಗುವರು?

ಸತ್ತವರ ಸ್ಥಿತಿಯ ಬಗ್ಗೆ ಯೋಬನು ಮಾತಾಡಿದನು:

> ಅಲ್ಲಿ ದುಷ್ಟರ ಆಗ್ರಹವು ಅಣಗಿ ಹೋಗುವದು,<br>
> ದಣಿದವರು ದಣುವಾರಿಸಿಕೊಳ್ಳುವರು,<br>
> ಸೆರೆಯಾದವರು ಬಾಧಿಸುವ ಅಧಿಕಾರಿಯ ಧ್ವನಿಯನ್ನೇ ಕೇಳದೆ<br>
> ಗುಂಪುಗುಂಪಾಗಿ ವಿಶ್ರಮಿಸಿಕೊಳ್ಳುವರು.<br>
> ಅಲ್ಲಿ ದೊಡ್ಡವರು ಚಿಕ್ಕವರು ಎಂಬ ಭೇದವಿಲ್ಲಾ,<br>
> ಆಳು, ಒಡೆಯ ಎಂಬ ಕಟ್ಟಳೆಯೂ ಇಲ್ಲ<br>
> (ಯೋಬ 3:17-19).

ಹೀಗೆ ಹೇಳುವದರಿಂದ ಅವನು ಮರಣಾನಂತರದ ಜೀವವನ್ನು ಸೂಚಿಸಿದನು,

ನನ್ನ ಚರ್ಮವು ಹೀಗೆ ಬಿರಿದು ಹಾಳಾದ ಬಳಿಕ
ನಿರ್ದೇಹನಾಗಿ ದೇವರನ್ನು ನೋಡುವೆನು;
ಕಣ್ಣಾರೆ ಕಾಣುವೆನು,
ನಾನೇ ನಾನಾಗಿ ನೋಡುವೆನು, ಮತ್ತೊಬ್ಬನಾಗಿ ಅಲ್ಲ
(ಯೋಬ 19:26, 27).

ತನ್ನ ಮಗುವಿನ ಮರಣಕ್ಕಾಗಿ ದುಃಖಪಡುತ್ತಿದ್ದಾಗ, ಅವನೊಂದಿಗಿರಲು ತಾನು ಹೋಗುವೆನೆಂಬ ಯೋಚನೆಯಿಂದ ದಾವೀದನು ಆದರಣೆ ಹೊಂದಿದನು (2 ಸಮುವೇಲ 12:23). ಇದು, ದಾವೀದನು ಮರಣಾನಂತರದ ಜೀವನದಲ್ಲಿ ನಂಬಿದ್ದನು ಎಂಬುದನ್ನು ಪ್ರಕಟಿಸುತ್ತದೆ. ತನ್ನ ಮಗನು ಅಸ್ತಿತ್ವದಲ್ಲಿರದಿದ್ದರೆ ಅವನೊಂದಿಗಿರಲು ಹೋಗುವದನ್ನು ಅವನು ಹೇಗೆ ಮುನ್ನೋಡ ಬಹುದು? ಒಬ್ಬಾತನ ಪ್ರಾಣವು ಪಾತಾಳದಲ್ಲಿ ಬಿಡಲ್ಪಡುವದಿಲ್ಲ ಎಂದು ದಾವೀದನು ಪ್ರವಾದನೆ ಹೇಳಿದನು (ಕೀರ್ತನೆ 16:10). ಈ ವಾಕ್ಯಭಾಗವು ಅಪೊಸ್ತಲರ ಕೃತ್ಯ 2:25-28ರಲ್ಲಿ ಯೇಸುವಿಗೆ ಅನ್ವಯಿಸಲ್ಪಟ್ಟಿದೆ.

"ದೂಳಿನ ನೆಲದೊಳಗೆ ದೀರ್ಘ ನಿದ್ರೆಮಾಡುವವರಲ್ಲಿ ಅನೇಕರು ಎಚ್ಚತ್ತು ಕೆಲವರು ನಿತ್ಯಜೀವವನ್ನು, ಕೆಲವರು ನಿಂದನ ನಿತ್ಯ ತಿರಸ್ಕಾರಗಳನ್ನು ಅನುಭವಿಸುವರು" (ದಾನಿಯೇಲ 12:2) ಎಂದು ದಾನಿಯೇಲನು ಬರೆದನು.

ಈ ವಾಕ್ಯಭಾಗಗಳು ಈ ಜೀವವು ನಮ್ಮ ಅಸ್ತಿತ್ವಕ್ಕೆ ಇರುವದೆಲ್ಲವೂ ಆಗಿರುವದಿಲ್ಲ ಎಂಬುದನ್ನು ತೋರಿಸುತ್ತವೆ. ನಾವು ಮರಣ ಹೊಂದಿದ ತರುವಾಯ, ನಾವು ಆತ್ಮಿಕ ಲೋಕದಲ್ಲಿ ಜೀವಿಸುವೆವು.

## ಹೊಸ ಒಡಂಬಡಿಕೆಯಿಂದ ಭರವಸೆ

ಹೊಸ ಒಡಂಬಡಿಕೆಯು ಮರಣಾನಂತರದ ಜೀವಿತವನ್ನು ಬೋಧಿಸುತ್ತದೆ. ನಿತ್ಯಜೀವವು ಯೇಸುವಿನ ಬೋಧನೆಯ ಪ್ರಮುಖ ಪ್ರಸ್ತಾಪಗಳಲ್ಲಿ ಒಂದಾಗಿದೆ (ಯೋಹಾನ 4:36; 6:54; 10:28; 12:25; 17:2, 3) ಮತ್ತು ಆ ಮುಖ್ಯ ಪ್ರಸ್ತಾಪವು ಹೊಸ ಒಡಂಬಡಿಕೆಯಲ್ಲೆಲ್ಲಾ ಮುಂದುವರಿಯುತ್ತದೆ (ಅಪೊಸ್ತಲರ ಕೃತ್ಯ 13:48; ರೋಮಾಪುರ 2:7; 1 ತಿಮೊಥೆ 6:12).

ಯೇಸುವಿನ ಪುನರುತ್ಥಾನವು ಮರಣಾನಂತರದ ಜೀವನದ ಬಗ್ಗೆ ರುಜುವಾತನ್ನು ಕೊಡುತ್ತದೆ (1 ಕೊರಿಂಥ 15:13-22) ಮತ್ತು ನಾವು ಪುನಃ ಜೀವಿಸುತ್ತೇವೆ ಎಂಬುದಕ್ಕೆ ಭರವಸೆಯನ್ನು ಕೊಡುತ್ತದೆ. "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ" (ಯೋಹಾನ 11:25); "ನಾನು ಜೀವಿಸುವದರಿಂದ ನೀವೂ ಜೀವಿಸುವಿರಿ" (ಯೋಹಾನು 14:19) ಎಂದು ಆತನು ಹೇಳಿದ್ದಾನೆ. ಯೇಸುವು, "ಸುವಾರ್ತೆಯ ಮೂಲಕ ಮರಣವನ್ನು ತೆಗೆದು ಹಾಕಿ ಜೀವವನ್ನೂ ಅಮರತ್ವವನ್ನೂ ಬೆಳಕಿಗೆ ತಂದಿದ್ದಾನೆ" (2 ತಿಮೊಥೆ 1:10).

ಕ್ರೈಸ್ತನಿಗಾಗಿ ಮರಣಾನಂತರ ಜೀವದ ಭರವಸೆಯು ತತ್ವ ಜ್ಞಾನದ ಮೇಲೆ, ತರ್ಕ ಶಾಸ್ತ್ರದ ಮೇಲೆ ಇಲ್ಲವೇ ಪುನಃ ಜೀವಿಸಬೇಕು ಎಂಬ ಆಂತರಿಕ ಹಂಬಲಿಸುವಿಕೆಯ ಮೇಲೆ ಅವಲಂಭಿಸಿರುವದಿಲ್ಲ. ಸತ್ತವರ ಪುನರುತ್ಥಾನದಲ್ಲಿ ನಂಬಿಕೆಯಿಡಲು ನಮಗೆ ಇವು ಕೆಲವು ತೆರಿಕೆಯ ಕಾರಣಗಳನ್ನು ಕೊಡಬಹುದು, ಆದರೆ ಅವು ರುಜುವಾತುಗಳಾಗಿರುವದಿಲ್ಲ. ಕ್ರೈಸ್ತನ ಭರವಸೆಯು ಹಲವಾರು ಸತ್ಯಗಳ ಮೇಲೆ ಅವಲಂಭಿಸಿರುತ್ತದೆ:

*ದೇವರು ವಿಶ್ವದ ಸೃಷ್ಟಿಕರ್ತನಾಗಿದ್ದಾನೆ.*

ದೇವರು ಅಸ್ತಿತ್ವದಲ್ಲಿ ಇಲ್ಲದಿದ್ದರೆ, ಆಗ "ಅಲ್ಲಿಯೋ ಎಲ್ಲಿಯೋ ಇರುವ ಶಕ್ತಿಯು" ಮರಣಾನಂತರ ಜೀವವನ್ನು ಒದಗಿಸಲಾರದು. ನಮ್ಮ ಸರ್ವಶಕ್ತ ದೇವರು ಅಸ್ತಿತ್ವದಲ್ಲಿರುವನು, ಮತ್ತು ನಾವು ಮರಣಹೊಂದಿದ ನಂತರ ಜೀವವನ್ನು ಒದಗಿಸ ಬಲ್ಲನು (ಅಪೊಸ್ತಲರ ಕೃತ್ಯ 26:8).

*ಯೇಸುವು ಮೆಸ್ಸೀಯನು, ದೇವರ ಕುಮಾರನು ಆಗಿದ್ದಾನೆ.*

ಯೇಸುವು ಮಾರ್ಗವೂ, ಸತ್ಯವೂ ಜೀವವೂ, ಆಗಿದ್ದಾನೆ (ಯೋಹಾನ 14:6). ಮರಣದನಂತರ ಜೀವದ ಬಗ್ಗೆ ಆತನು ಹೇಳಿದ್ದು ಸತ್ಯವಾಗಿದೆ, ಯಾಕಂದರೆ ಆತನು ಸತ್ಯವನ್ನು ಹೇಳಿದ್ದಾನೆ (ಯೋಹಾನ 18:37). ಆತನ ಬೋಧನೆಯಲ್ಲಿ ನಾವು ಸತ್ಯವನ್ನು ಕಂಡು ಕೊಳ್ಳುತ್ತೇವೆ (ಯೋಹಾನ 8:40); ಆತನ ಬಲದಲ್ಲಿ ನಾವು ಭರವಸೆಯನ್ನು ಕಂಡುಕೊಳ್ಳುತ್ತೇವೆ (ಯೋಹಾನ 11:25, 26); ಆತನ ಪುನರುತ್ಥಾನದಲ್ಲಿ ನಮಗೆ ನಿರೀಕ್ಷೆಯಿರುತ್ತದೆ (1 ಕೊರಿಂಥ 15:20-22); ಮತ್ತು ಆತನ ಜೀವದಲ್ಲಿ ನಮಗೆ ಜೀವವಿದೆ (ಯೋಹಾನ 14:19).

*ಬೈಬಲ್ ದೇವರ ವಾಕ್ಯವಾಗಿದೆ.*

ಬೈಬಲನ್ನು ಬರೆದವರನ್ನು ದೇವರ ದೈವಿಕ ಹಸ್ತವು ಚಲಿಸುವಂತೆ ಮಾಡಿತು ಎಂಬುದನ್ನು ಪುರಾವೆಯು ರುಜುವಾತು ಪಡಿಸುತ್ತದೆ (2 ತಿಮೊಥೆ 3:16). ಅಂದರೆ ಮರಣಾನಂತರದ ಜೀವವನ್ನು ಕುರಿತ ಪ್ರತಿಯೊಂದು ಹೇಳಿಕೆಯು ಸತ್ಯವಾದದ್ದಾಗಿದೆ.

*ಹೊಸ ಒಡಂಬಡಿಕೆಯ ಬರಹಗಾರರ ಸಾಕ್ಷಿಯು ಸತ್ಯವಾದದ್ದಾಗಿದೆ.*

ಯಾವ ವ್ಯತ್ಯಾಸವಿಲ್ಲದೆ, ಅವರೆಲ್ಲರೂ ಕ್ರಿಸ್ತನು ಎದ್ದು ಬಂದದ್ದನ್ನು ಮತ್ತು ಪುನಃ ಜೀವಿಸುವದನ್ನು ನೋಡಿದೆವೆಂದು ಒಪ್ಪಿಕೊಂಡರು. ಅವರಲ್ಲಿ ಹೆಚ್ಚಾದವರು ತಮ್ಮ ರಕ್ತದೊಂದಿಗೆ ತಮ್ಮ ಸಾಕ್ಷಿಗಳ ದೃಢತೆಯನ್ನು ಬರೆದರು; ಮರಣದ ಭಯವನ್ನು ಎದುರಿಸಿದಾಗ, ಅವರು ಆತನ ಪುನರುತ್ಥಾನಕ್ಕೆ ತಮ್ಮ ಸಾಕ್ಷಿಯನ್ನು ಕೊಟ್ಟರು (ಅಪೊಸ್ತಲರ ಕೃತ್ಯ 5:29-31).

ದೇವರು ಅಸ್ತಿತ್ವದಲ್ಲಿದ್ದಾನೆ, ಬೈಬಲು ಆತನ ವಾಕ್ಯವಾಗಿದೆ, ಹೊಸ ಒಡಂಬಡಿಕೆಯು ನಂಬಲರ್ಹ ಸಾಕ್ಷಿಯನ್ನು ಒಳಗೊಂಡಿದೆ, ಮತ್ತು ಯೇಸುವು ಕ್ರಿಸ್ತನಾಗಿದ್ದಾನೆ ಎಂಬ ಮಹತ್ತರವಾದ ಪುರಾವೆಯ ಮೇಲೆ, ನಮ್ಮ ವಿಶ್ವಾಸವು ಸ್ಥಾಪಿಸಲ್ಪಟ್ಟಿದೆ. ಈ ಪುರಾವೆಯ ಮೇಲೆ ಮರಣವು ದೇಹವನ್ನು ರದ್ದುಕೊಂಡರೂ ನಾನು ಸತ್ತುಹೋದರೂ ನಾವು ಜೀವಿ ಸುತ್ತೇವೆ ಎಂಬ ನಮ್ಮ ಭರವಸೆಯನ್ನೂ ವಿಶ್ವಾಸವನ್ನೂ ಇಡುತ್ತೇವೆ.

## ಮುಕ್ತಾಯ

ಮರಣಾನಂತರದ ಜೀವಕ್ಕಾಗಿ ನಮ್ಮ ನಮ್ಮ ಹೃದಯಗಳಲ್ಲಿಯ ಹಂಬಲವು

ದೈವಿಕ ಪ್ರಕಟಣೆಯಿಂದ ಭರವಸೆಯು ಕೊಡಲ್ಪಟ್ಟಿದೆ. ನಾವು ಮರಣಹೊಂದಿದ ನಂತರ ನಾವು ಜೀವಿಸುತ್ತೇವೆಂಬುದನ್ನು ಪ್ರಯೋಗ ಮಾಡುವದರಿಂದ ನಾವು ರುಜುವಾತು ಪಡಿಸಲಾರೆವು, ಇಲ್ಲವೇ ಪ್ರದರ್ಶಿಸಲಾರೆವು. ಸತ್ತವರ ಲೋಕವನ್ನು ಕುರಿತು ಯಾರೂ ಹಿಂದಿರುಗಿ ಬಂದು ವೈಯಕ್ತಿಕವಾಗಿ ನಮಗೆ ಸಾಕ್ಷಿಕೊಟ್ಟಿರುವದಿಲ್ಲ. ಮರಣಾನಂತರದ ಜೀವದ ನಮ್ಮ ಬರವಸೆಯು ಕ್ರಿಸ್ತನ ಪುನರುತ್ಥಾನದ ಮತ್ತು ದೇವರ ಪ್ರಕಟನೆಯ ಮೇಲೆ, ವಿಶೇಷವಾಗಿ ಯೇಸುಕ್ರಿಸ್ತನ ಮುಖಾಂತರ ಬಂದ ಪ್ರಕಟನೆಯ ಮೇಲೆ ಅವಲಂಭಿಸಿರುತ್ತದೆ. ನಾವು ಮರಣದ ಘಟನೆಯನ್ನು ದಾಟಿಹೋಗುವಾಗ, ನಾವು ನಿರ್ಮೂಲಕ್ಕೆ ನಡೆಯುವದಿಲ್ಲ ಆದರೆ ಜೀವದೊಳಗೆ ನಡೆಯುವೆವು ಎಂಬುದನ್ನು ತಿಳಿಯ ಬಹುದು.

| ಹಳೇ ಮತ್ತು ಹೊಸ ಒಡಂಬಡಿಕೆಯಲ್ಲಿ ದಾಖಲೆಯಾದ ಪುನರುತ್ಥಾನಗಳು | |
|---|---|
| 1 ಅರಸು 17:20-23 | ಚಾರೆಪ್ತದ ವಿಧವೆಯ ಮಗನು ಎಲೀಯನಿಂದ ಎಬ್ಬಿಸಲ್ಪಟ್ಟನು. |
| 2 ಅರಸು 4:32-37 | ಶೂನೇಮ್ಯಳ ಮಗನು ಎಲೀಷನಿಂದ ಎಬ್ಬಿಸಲ್ಪಟ್ಟನು. |
| 2 ಅರಸು 13:21 | ಎಲೀಷನ ಸಮಾಧಿಯಲ್ಲಿ ಮೋವಾಬ್ಯರಿಂದ ಹೊಣಲ್ಪಟ್ಟ ಒಬ್ಬ ಮನುಷ್ಯನಿಗೆ ಪ್ರವಾದಿಯ ಎಲುಬುಗಳು ಸ್ಪರ್ಶಿಸಿದಾಗ ಜೀವದಿಂದ ಅವನು ಎದ್ದುಬಂದನು. |
| ಮತ್ತಾಯ 9:18-25 | ಸಭಾ ಮಂದಿರದ ಅಧಿಕಾರಿಯಾದ ಯಾಯೀರನ ಮಗಳು ಯೇಸುವಿನಿಂದ ಎಬ್ಬಿಸಲ್ಪಟ್ಟಳು. |
| ಮತ್ತಾಯ 27:52, 53 | ಯೇಸುವಿನ ಮರಣದ ಸಮಯದಲ್ಲಿ ಅನೇಕ ಭಕ್ತರು ದೇವರಿಂದ ಎಬ್ಬಿಸಲ್ಪಟ್ಟರು. |
| ಮತ್ತಾಯ 28:1-9 | ಯೇಸುವು ಪುನರುತ್ಥಾನ ಹೊಂದಿದನು. |
| ಲೂಕ 7:11-17 | ನಾಯಿನ ಊರಿನ ವಿಧವೆಯ ಮಗನು ಯೇಸುವಿನಿಂದ ಎಬ್ಬಿಸಲ್ಪಟ್ಟನು. |
| ಯೋಹಾನ 11:23-44 | ಲಾಜರನು ಯೇಸುವಿನಿಂದ ಎಬ್ಬಿಸಲ್ಪಟ್ಟನು. |
| ಅಪೊಸ್ತಲರ ಕೃತ್ಯ 9:36-41 | ದೊರ್ಕಳು ಯೇಸುವಿನಿಂದ ಎಬ್ಬಿಸಲ್ಪಟ್ಟಳು. |
| ಅಪೊಸ್ತಲರ ಕೃತ್ಯ 20:9-12 | ಯೂತಿಖನು ಪೌಲನಿಂದ ಎಬ್ಬಿಸಲ್ಪಟ್ಟನು. |



© 2009 Truth for Today